ನಿಮ್ಮೊಡನೆ

# ಮನೆಯ ಒಳಗೂ ಹಿಂಸೆ..

ಬೆಂಗಳೂರು 'ಸಜ್ಜನರ, ಸುಸಂಸ್ಕೃತರ ನಗರ' ಎನ್ನುವ ಮಾತಿದೆ. ಆದರೆ ಕೇಂದ್ರ ಗೃಹ ಸಚಿವಾಲಯದ ಅಂಕಿ ಅಂಶಗಳನ್ನು ಗಮನಿಸಿದರೆ ಇಲ್ಲಿನ ಪರಿಸ್ಥಿತಿ ಹದಗೆಡುತ್ತಿರುವುದು ಸ್ಪಷ್ಟ. ಮುಂಬೈ ಮತ್ತು ಚೆನ್ನೈ ಮಹಾನಗರಗಳಿಗಿಂತ ಹೆಚ್ಚು ಗೃಹಹಿಂಸೆಯ ಪ್ರಕರಣಗಳು ಬೆಂಗಳೂರಿನಲ್ಲಿ ನಡೆಯುತ್ತಿವೆ ಎನ್ನುವುದು ಗಮನಿಸಬೇಕಾದ ಅಂಶ.

ಹೆಚ್ಚುತ್ತಿರುವ ಅತ್ಯಾಚಾರ, ದೌರ್ಜನ್ಯ ಪ್ರಕರಣಗಳ ಹಿನ್ನೆಲೆಯಲ್ಲಿ 'ಮಹಿಳೆಯರು ಮನೆಯ ಹೊರಗೆ ಸುರಕ್ಷಿತವಾಗಿಲ್ಲ' ಎಂದು ಇಡೀ ದೇಶಕ್ಕೆ ದೇಶವೇ ಆಕ್ರೋಶ ವ್ಯಕ್ತಪಡಿಸುತ್ತಿರುವ ಹೊತ್ತಲ್ಲೇ ಪ್ರಕಟವಾಗಿರುವ ಒಂದು ವರದಿ, 'ಮಹಿಳೆಯರು ಮನೆಯ ಒಳಗೂ ಸುರಕ್ಷಿತವಾಗಿಲ್ಲ. ದೇಶದ ಆರು ಮಹಾನಗರಗಳಲ್ಲಿ ಗೃಹ ಹಿಂಸೆಯ ಪ್ರಕರಣಗಳು ಒಂದೇ ಸಮನೆ ಹೆಚ್ಚುತ್ತಿವೆ' ಎಂದು ತಿಳಿಸಿರುವುದು ಆತಂಕದ ವಿಷಯ. ದೆಹಲಿ, ಬೆಂಗಳೂರು ಸಹಿತ ಆರು ಮಹಾನಗರಗಳಲ್ಲಿ ಮಹಿಳೆಯರಿಗೆ ಮನೆಗಳಲ್ಲೇ ಆಗುತ್ತಿರುವ ಹಿಂಸೆಯ ಕುರಿತು ಕೇಂದ್ರ ಗೃಹ ಸಚಿವಾಲಯವು ಅಂಕಿ ಅಂಶಗಳನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ರಾಷ್ಟ್ರದ ರಾಜಧಾನಿ ದೆಹಲಿ ಮೊದಲ ಸ್ಥಾನ ಪಡೆದಿದ್ದರೆ, ಐಟಿ– ಬಿಟಿ ರಾಜಧಾನಿಯಾಗಿರುವ ಬೆಂಗಳೂರು ನಾಲ್ಕನೇ ಸ್ಥಾನದಲ್ಲಿದೆ. ದೆಹಲಿಯಲ್ಲಿ 2009ರಲ್ಲಿ ಒಟ್ಟು 1177 ಗೃಹ ಹಿಂಸೆಯ ಪ್ರಕರಣಗಳು ವರದಿಯಾಗಿದ್ದರೆ, 2011ರಲ್ಲಿ ಅದು 1498ಕ್ಕೆ ಏರಿದೆ. ಹಾಗೆಯೇ ಬೆಂಗಳೂರಿನಲ್ಲಿ 2009ರಲ್ಲಿ 367 ಗೃಹ ಹಿಂಸೆಯ ಪ್ರಕರಣಗಳು ವರದಿಯಾಗಿದ್ದರೆ, 2011ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆ 458ಕ್ಕೆ ಏರಿದೆ.

ಬೆಂಗಳೂರು 'ಸಜ್ಜನರ, ಸುಸಂಸ್ಕೃತರ ನಗರ' ಎನ್ನುವ ಮಾತಿದೆ. ಆದರೆ ಕೇಂದ್ರ ಗೃಹ ಸಚಿವಾಲಯದ ಅಂಕಿ ಅಂಶಗಳನ್ನು ಗಮನಿಸಿದರೆ ಇಲ್ಲಿನ ಪರಿಸ್ಥಿತಿ ಹದಗೆಡುತ್ತಿರುವುದು ಸ್ಪಷ್ಟ. ಮುಂಬೈ ಮತ್ತು ಚೆನ್ನೈ ಮಹಾನಗರಗಳಿಗಿಂತ ಹೆಚ್ಚು ಗೃಹಹಿಂಸೆಯ ಪ್ರಕರಣಗಳು ಬೆಂಗಳೂರಿನಲ್ಲಿ ನಡೆಯುತ್ತಿವೆ ಎನ್ನುವುದು ಗಮನಿಸಬೇಕಾದ ಅಂಶ. ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಬೆಂಗಳೂರು ಮುಂಬೈಗಿಂತ ಸಣ್ಣ ನಗರ. ಮುಂಬೈಯ ಜನಸಂಖ್ಯೆ 2 ಕೋಟಿ ದಾಟಿದ್ದರೆ, ಬೆಂಗಳೂರಿನ ಜನಸಂಖ್ಯೆ ಒಂದು ಕೋಟಿಯ ಗಡಿಯಲ್ಲಿದೆ. ಆದರೆ ಮುಂಬೈಯಲ್ಲಿ 2009ರಲ್ಲಿ 434 ಗೃಹಹಿಂಸೆಯ ಪ್ರಕರಣಗಳು ವರದಿಯಾಗಿದ್ದರೆ, 2011ರ ವೇಳೆಗೆ ಅದು ಇಳಿಮುಖವಾಗಿದ್ದು 393ಕ್ಕೆ ಇಳಿದಿದೆ. ಮುಂಬೈಯಲ್ಲಿ ಗೃಹಹಿಂಸೆಯ ಪ್ರಕರಣಗಳ ಕನಿಷ್ಠ ಸಂಖ್ಯೆಗೆ ಹಾಗೂ ಇಳಿಕೆಗೆ ಕಾರಣಗಳೇನು ಎನ್ನುವುದನ್ನು ಅಧ್ಯಯನ ಮಾಡಬೇಕಾದ ಅಗತ್ಯ ಬೆಂಗಳೂರಿಗೆ ಇದೆ.

ಇದೇ ಸಂದರ್ಭದಲ್ಲಿ ಪ್ರಕಟವಾಗಿರುವ ಕೇಂದ್ರ ಸರಕಾರದ ರಾಷ್ಟ್ರೀಯ ಮಾದರಿ ಸರ್ವೇಯ ಅಂಕಿ ಅಂಶಗಳು ಮಹಾನಗರಗಳಿಗೆ ಮಹಿಳೆಯರ ವಲಸೆ ಪುರುಷರಿಗಿಂತ ಹೆಚ್ಚಿದೆ ಎನ್ನುವುದನ್ನು ಬಹಿರಂಗಗೊಳಿಸಿದೆ. ಕಳೆದ ಮೂರು ದಶಕಗಳಲ್ಲಿ ದೇಶದಲ್ಲಿ ಮಹಾನಗರಗಳಿಗೆ ವಲಸೆ ಬರುವ ಪುರುಷರ ಸಂಖ್ಯೆಯಲ್ಲಿ ಸ್ಥಿರತೆ ಕಂಡು ಬಂದಿದ್ದರೆ, ಮಹಿಳೆಯರ ವಲಸೆ ಶೇಕಡಾ 20ರಷ್ಟು ಹೆಚ್ಚಿದೆ. ಬಹುತೇಕ ಮಹಿಳೆಯರು ಉದ್ಯೋಗ ಹುಡುಕಿಕೊಂಡು ಮತ್ತು ಮದುವೆಯಾಗಿ ಗಂಡನ ಜತೆಗೆ ವಾಸಿಸಲು ಮಹಾನಗರಗಳಿಗೆ ವಲಸೆ ಬರುತ್ತಿದ್ದಾರೆ. ನಗರಕೇಂದ್ರಿತ ಜೀವನಶೈಲಿಗೆ ಒಗ್ಗುವ ಶ್ರಮದ ಜತೆಗೆ, ಗಂಡನ ಹಾಗೂ ಆತನ ಮನೆಯವರ ದೌರ್ಜನ್ಯಗಳನ್ನೂ ಸಹಿಸಬೇಕಾದ ಸ್ಥಿತಿ ನಗರಗಳಿಗೆ ಮದುವೆಯಾಗಿ ಬರುವ ಹೆಣ್ಣುಮಕ್ಕಳಿಗೆ ಇದೆ ಎನ್ನುವುದು ಸ್ಪಷ್ಟ. ಮನೆಯ ಹೊರಗೆ ನಡೆಯುವ ದೌರ್ಜನ್ಯಗಳನ್ನು ಮನೆಯವರ ಬಳಿಯಾದರೂ ಹೇಳಿಕೊಂಡು ಪರಿಹಾರ, ಸಾಂತ್ವನ ಪಡೆಯಬಹುದು. ಆದರೆ ಮನೆಯ ಒಳಗೇ ಹೆಣ್ಣಿಗೆ ಹಿಂಸೆಯ ಪ್ರಕರಣಗಳು ಹೆಚ್ಚಾದರೆ ಅಳಲು ತೋಡಿಕೊಳ್ಳುವುದಾದರೂ ಯಾರಲ್ಲಿ? ಮಹಿಳೆಯರ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಬೇಕಾದ ಅಗತ್ಯವಿದೆ. ಇಂತಹ ಸಂಸ್ಥೆಗಳನ್ನು ಬಲಪಡಿಸಲು ಸರಕಾರವೂ ಮಹತ್ವದ ಹೆಜ್ಜೆಗಳನ್ನು ಇಡಬೇಕಿದೆ.

ನಗರಗಳಿಗೆ ವಲಸೆ ಹೆಚ್ಚುತ್ತಿರುವುದು ಕೇವಲ ಮೂಲಸೌಕರ್ಯಗಳ ಕೊರತೆಯನ್ನಷ್ಟೇ ಹೆಚ್ಚಿಸುತ್ತಿಲ್ಲ, ಜತೆಗೆ ಕೌಟುಂಬಿಕ ಏರುಪೇರುಗಳನ್ನೂ ಉಂಟು ಮಾಡುತ್ತಿದೆ. ದೇಶದಲ್ಲಿ 8000 ನಗರಗಳನ್ನು ಗುರುತಿಸಲಾಗಿದ್ದು, 1961ರಲ್ಲಿ 7.90 ಕೋಟಿ ಇದ್ದ ನಗರವಾಸಿಗಳ ಸಂಖ್ಯೆ ಐದು ದಶಕಗಳಲ್ಲಿ ಐದು ಪಟ್ಟು ಹೆಚ್ಚಾಗಿದೆ. ಹೀಗೆಯೇ ನಗರಗಳ ಜನಸಂಖ್ಯೆಯ ಪ್ರಮಾಣ ಏರುತ್ತಿದ್ದರೆ 2030ರ ವೇಳೆಗೆ ನಗರವಾಸಿಗಳ ಸಂಖ್ಯೆ 60 ಕೋಟಿಗೆ ಏರಬಹುದು ಎಂದೂ ಸಮೀಕ್ಷೆ ತಿಳಿಸಿದೆ.

ಹಳ್ಳಿಗಳಿಂದ ನಗರಗಳಿಗೆ ಮಹಿಳೆಯರ ವಲಸೆಯ ಸಂಖ್ಯೆ ಏರುವುದಕ್ಕೂ, ಮಹಾನಗರಗಳಲ್ಲಿ ಮಹಿಳೆಯರ ಮೇಲೆ ಗೃಹ ಹಿಂಸೆಯ ಪ್ರಕರಣಗಳು ಏರುವುದಕ್ಕೂ ಸಂಬಂಧ ಇರಬಹುದು. ಈ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು ಹೊಸ ಅಧ್ಯಯನ ನಡೆಸಬೇಕಾದ ಅಗತ್ಯವಿದೆ. ಮಹಿಳೆಯರ ಸಾಂತ್ವನ ಕೇಂದ್ರಗಳು, ಆಪ್ತ ಸಮಾಲೋಚನಾ ಕೇಂದ್ರಗಳ ಸಂಖ್ಯೆ ಹೆಚ್ಚಬೇಕಿದೆ. ಜತೆಗೆ ಮಹಿಳೆಯರ ಆರ್ಥಿಕ ಸಬಲೀಕರಣದ ಬಗ್ಗೆ ಸರಕಾರ ಹೆಚ್ಚು ಯೋಜನೆಗಳನ್ನು ಹಮ್ಮಿಕೊಳ್ಳಬೇಕಿದೆ. ಬೆಂಗಳೂರಿನಲ್ಲೂ ಹಳ್ಳಿಗಳಿಂದ ವಲಸೆ ಹೆಚ್ಚಾಗುತ್ತಿದ್ದು, ನಗರದ ಶೇಕಡಾ 20ರಷ್ಟು ಜನರು ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಗೃಹ ಹಿಂಸೆಯ ಪ್ರಕರಣಗಳಲ್ಲಿ ಬೆಂಗಳೂರು ದೆಹಲಿಗೆ ಪ್ರತಿಸ್ಪರ್ಧೆ ಒಡ್ಡುವಂತಹ ಪರಿಸ್ಥಿತಿ ಬರುವ ಮುನ್ನ ನಾವೂ ಎಚ್ಚೆತ್ತುಕೊಳ್ಳಬೇಕಿದೆ.

■ ಬಿ.ಎಂ.ಹನೀಫ್



ವಿಷ್ಣು